
# ಪರ್ವತದಿಂದ ನದಿಗೆ ಓಡಿದ ರೈಲು

ಸಂಗ್ರಹ : ಸುನಯನ ವಾಲ್ಟರ್ಸ್



ಕೆನಡಾದ ಪರ್ವತ ಪ್ರದೇಶದಲ್ಲಿ ಅದೊಂದು ಹಿಮಪಾತದ ಕಾರ್ಗತ್ತಲಿನ ರಾತ್ರಿಯಾಗಿತ್ತು. 117 ಡಬ್ಬಿಗಳಿಂದೊಡಗೂಡಿದ ಸರಕು ಸಾಗಾಟದ ರೈಲು ಆ ದಾರಿಯಲ್ಲಿ ಎಂದಿನಂತೆ ಓಡುತ್ತಿತ್ತು. ಎಂಜಿನ್‌ನಲ್ಲಿ ಒಬ್ಬ ತಾಂತ್ರಿಕ ತಜ್ಞ ಮತ್ತು ಇಬ್ಬರು ಅಗ್ನಿಶಾಮಕ ಪರಿಣಿತರಿದ್ದರು.

ರೈಲು ನಿಧಾನವಾಗಿ ಗುಡ್ಡ ಏರಿ, ಇನ್ನೊಂದು ಬದಿಯಿಂದ ಇಳಿಯಲಾರಂಭಿಸಿತು. ಮುಂದಿನ ಡಬ್ಬಿಗಳು ನಿಧಾನವಾಗಿಯೇ ಇಳಿದುವು. ಏಕೆಂದರೆ ಹಿಂದಿನ ಡಬ್ಬಿಗಳ ಭಾರವು ಅವುಗಳನ್ನು ತಡೆದಿತ್ತು. ಆದರೆ ಇನ್ನೂ ಕೆಳಗೆ ಇಳಿದಾಗ ಎಂಜಿನ್‌ನ ಹಿಂದೆ ಒತ್ತಡ ಹೆಚ್ಚಾಯಿತು. ರೈಲಿನ ವೇಗ ಹೆಚ್ಚಾಗುತ್ತಾ ಹೋಯಿತು. ತಾಂತ್ರಿಕ ತಜ್ಞನಿಗೆ ತಿಳಿಯಿತು, ಬ್ರೇಕ್‌ಗಳು ಸರಿಯಾಗಿ ಕೆಲಸಮಾಡುತ್ತಿಲ್ಲವೆಂದು! ಇನ್ನೂ ಸರಿಯಾಗಿ ಪರೀಕ್ಷಿಸುವಾಗ....... ಬ್ರೇಕ್‌ಗಳು ಪೂರ್ತಿ ವಿಫಲವಾದುದು ತಿಳಿದುಬಂತು !! ಹಳಿಗಳಲ್ಲಿ ಮಂಜಿನ ಲೇಪನವಿತ್ತು ಮತ್ತು 117 ಬೋಗಿಗಳು ಆ ಹಳಿಗಳ ಮೇಲೆ ವೇಗವಾಗಿ ಜಾರುತ್ತಿದ್ದವು.

ನಮ್ಮ ಜೀವನವು ಹೆಚ್ಚಾಗಿ ತೃಪ್ತಿಕರವಾಗಿ ನಡೆಯುತ್ತಿರುತ್ತದೆ, ಆಗ ನಮಗೆ ದೇವರ ಸಹಾಯದ ಅಗತ್ಯತೆ ಕಾಣುವುದಿಲ್ಲ. ಆದರೆ ಕೆಲವು ಬಾರಿ ತೊಂದರೆಗಳನ್ನು ಎದುರಿಸುವ ಸಂದರ್ಭಗಳನ್ನು ದೇವರು ಬರಮಾಡುತ್ತಾನೆ. ಆಗ ನಾವು ನಮ್ಮ ನಿಯಂತ್ರಣದಲ್ಲಿಲ್ಲವೆಂದು ನಮಗೆ ತಿಳಿಯುತ್ತದೆ. ದೇವರು ಮಾತ್ರ ನಮ್ಮ ಜೀವಿತವನ್ನು ನಿಯಂತ್ರಣದಲ್ಲಿಡಲು ಶಕ್ತನಾಗಿದ್ದಾನೆ. ನಿಮಗೆ "ಬ್ರೇಕ್" ಇಲ್ಲವೆಂದು ತಿಳಿಯಲು ವೃದ್ಧಾಪ್ಯದವರೆಗೂ ಕಾಯುವುದು ಬೇಡ. ಯೌವನದಲ್ಲಿ ಬೆಳೆಸಿಕೊಂಡ ಚಿಕ್ಕ ಚಿಕ್ಕ ದುರಭ್ಯಾಸಗಳು ನಿಮ್ಮ ವೃದ್ಧಾಪ್ಯದಲ್ಲಿ ಜೀವಿತವನ್ನು ಹಾಳುಮಾಡಬಲ್ಲವು.

**ಸತ್ಯವೇದವು ನಿಮಗೆ ನೆನಪಿಸುತ್ತದೆ**

*"ಮನುಷ್ಯನು ತಾನು ಏನು ಬಿತ್ತುತ್ತಾನೋ ಅದನ್ನೇ ಕೊಯ್ಯಬೇಕು"* (ಗಲಾತ್ಯ 6:7). ದೇವರನ್ನು ನಿಮ್ಮ ಸ್ವಂತ ರಕ್ಷಕನಾಗಿ ಅಂಗೀಕರಿಸಿರಿ ಮತ್ತು ನಿಮ್ಮ ಜೀವನದ ನಿಯಂತ್ರಣವನ್ನು ಆತನ ಕೈಗೆ ಕೊಟ್ಟು ನಿಶ್ಚಿಂತರಾಗಿರಿ.

ಆ ರೈಲು ಬಹಳ ವೇಗ ಪಡೆದುಕೊಂಡಂತೆ ಒಳಗಿದ್ದ ಮೂರು ಜನರು ಹೊರಗೆ ಹಾರಿಕೊಳ್ಳುವ ಯೋಚನೆ ಮಾಡಿದರು. ಆದರೆ ತಾಸಿಗೆ 85 ಮೈಲುಗಳಿಗೂ ಮಿಕ್ಕಿದ ಅದರ ವೇಗವು ಭಯಾನಕವಾಗಿತ್ತು. ಇದು ಅದರ ಸಾಮಾನ್ಯ ವೇಗದ ಎರಡು ಪಟ್ಟು ! ರೈಲು ಮುಂದೆ ಹೋದಂತೆ ಆ ಮೂವರ ಕಂಗಳಲ್ಲಿ ಸಾವಿನ ನರ್ತನವಾರಂಭವಾಯಿತು. ತಾಂತ್ರಿಕ ತಜ್ಞನು ಉಳಿದವರಿಗೆ ಪ್ರಾರ್ಥಿಸಲು ಹೇಳಿದನು. ಅಂತೆಯೇ ಮೂವರೂ ಪ್ರಾರ್ಥನೆಯಲ್ಲಿ ತೊಡಗಿಕೊಂಡರು. ಏಕೆಂದರೆ ಅವರಿಗೆ ಬೇರೆ ದಾರಿ ಇರಲಿಲ್ಲ. ಅದಕ್ಕಾಗಿ ಕೊನೆಯ ನಿಮಿಷದವರೆಗೂ ಕಾಯುವ ಅಗತ್ಯವಿಲ್ಲ. ನೀವು ಆತನೆಡೆಗೆ ಈಗಲೇ ತಿರುಗಿಕೊಂಡು ಆತನು ನಿಮಗೆ ಸದಾ ಸಹಾಯ ಮಾಡುತ್ತಾನೆಂದು ತಿಳಿದುಕೊಳ್ಳಬಹುದು.

ಹಿಂದಿನ ಅಡಿಗೆಮನೆಯ ವಿಭಾಗದಲ್ಲಿ ಇದ್ದ ಇಬ್ಬರು ಸಿಬ್ಬಂದಿಗಳು ಏನು ನಡೆಯುತ್ತಿದೆ ಎಂದು ಚಕಿತರಾಗಿದ್ದರು. ರೈಲು ತೀರಾ ವೇಗವಾಗಿ ಓಡುತ್ತಿದೆಯೆಂದು ತಿಳಿದರೂ ಅವರಿಗೆ ಏಕೆಂದು ತಿಳಿಯಲಿಲ್ಲ. ಮುಂಜಾಗ್ರತೆಗಾಗಿ ಅವರು ಅವರಿದ್ದ ವಿಭಾಗವನ್ನು ಎಂಜಿನಿನಿಂದ ಬೇರ್ಪಡಿಸಿದರು. ಹೀಗಾಗಿ ಅದರ ಚಲನೆ ನಿಧಾನವಾಯಿತು

ಕೊನೆಗೂ ಒಂದು ತಿರುವಿನಲ್ಲಿ ರೈಲು ಹಳಿ ತಪ್ಪಿತು. 104 ಡಬ್ಬಿಗಳು ಚೆಲ್ಲಾಪಿಲ್ಲಿಯಾಗಿ ಕೆಳಗುರುಳಿ, ಹರಿಯುತ್ತಿದ್ದ

ನದಿಯಲ್ಲಿ ಬಿದ್ದುವು. ಆದರೆ ಎಂಜಿನ್ ಮತ್ತು ತಮ್ಮದೇ ಸ್ವಂತ ಬ್ರೇಕ್‌ಗಳಿದ್ದ ಅಡುಗೆ ಮನೆಯ ಬೋಗಿಗಳು ಹಳಿಗಳ ಮೇಲೆ ಭದ್ರವಾಗಿ ನಿಂತುವು! ಖಚಿತ ಮರಣದಿಂದ ದೇವರು ಅವರನ್ನು ತಪ್ಪಿಸಿದ್ದನು. ದೇವರು ನಮ್ಮನ್ನು ಪ್ರೀತಿಸಿ ನಮಗಾಗಿ ತನ್ನ ಮಗನನ್ನು ಮರಣಕ್ಕೆ ಒಳಗಾಗಿಸಿದನು. ಆತನ ರಕ್ತವು ನಮ್ಮ ಪಾಪಗಳನ್ನು ತೊಳೆಯಬಲ್ಲುದು ಮತ್ತು ಆತನು ನಮ್ಮನ್ನು ನಿತ್ಯ ಜೀವಕ್ಕೆ ಒಯ್ಯಬಲ್ಲನು. ಆದುದರಿಂದ ಯೌವನಕಾಲದಲ್ಲಿಯೇ ಆತನನ್ನು ಸ್ವೀಕರಿಸಬಲ್ಲಿರಾ?

*"ಕಷ್ಟದ ದಿನಗಳೂ, ಸಂತೋಷವಿಲ್ಲವೆಂದು ನೀನು ಹೇಳುವ ವರುಷಗಳೂ ಸಮೀಪಿಸುವುದರೊಳಗಾಗಿ ಯೌವನದಲ್ಲಿಯೇ ನಿನ್ನ ಸೃಷ್ಟಿಕರ್ತನನ್ನು ಸ್ಮರಿಸು"* (ಪ್ರಸಂಗಿ).